# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 152

ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು.

ಉತ್ತರಿಸುವ ದಿನಾಂಕ : 16.07.2024

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ತೆಂಗು ಬೆಳೆಯುವ ಭೂಮಿಯ ಒಟ್ಟು ವಿಸ್ತೀರ್ಣವೆಷ್ಟು: ಬೆಳೆ ವಿಸ್ತೀರ್ಣ ಹಾಗೂ ವಾರ್ಷಿಕ ಉತ್ಪನ್ನದ ಮಾಹಿತಿಯನ್ನು ಜಿಲ್ಲಾವಾರು ನೀಡುವುದು. | ರಾಜ್ಯದಲ್ಲಿ ತೆಂಗು ಬೆಳೆಯುವ ಭೂಮಿಯ ಒಟ್ಟು ವಿಸ್ತೀರ್ಣ 7,04,438 ಹೆಕ್ಟೇರ್ ಆಗಿರುತ್ತದೆ. ಬೆಳೆ ವಿಸ್ತೀರ್ಣ ಹಾಗೂ ವಾರ್ಷಿಕ ಉತ್ಪನ್ನದ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಆ) | "ಕೇಂದ್ರ ತೆಂಗು ಅಭಿವೃದ್ಧಿ ಮಂಡಳಿ' ವತಿಯಿಂದ ರಾಜ್ಯದ ತೆಂಗು ಬೆಳೆಗಾರರಿಗೆ ದೊರೆಯುತ್ತಿರುವ ನೆರವು ಮತ್ತು ಸೌಲಭ್ಯಗಳು ಯಾವುವು: | ಕೇಂದ್ರ ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ರಾಜ್ಯದ ತೆಂಗು ಬೆಳೆಗಾರರಿಗೆ ದೊರೆಯುತ್ತಿರುವ ನೆರವು ಮತ್ತು ಸೌಲಭ್ಯಗಳ ವಿವರಗಳು ಈ ಕೆಳಗಿನಂತಿವೆ.<br>1. **<u>ಹೊಸ ಮರುನಾಟಿ ಮತ್ತು ಪುನ:ಶ್ಚೇತನ ಕಾರ್ಯಕ್ರಮ ಹಾಗೂ ನಿರ್ವಹಣೆ ಕಾರ್ಯಕ್ರಮ</u>**<br>ತೆಂಗಿನ ತೋಟಗಳ ಪುನ:ಶ್ಚೇತನ ಹಾಗೂ ಮರುನಾಟಿ ಮತ್ತು ನಿರ್ವಹಣೆಗಾಗಿ ಒಂದು ಹೆಕ್ಟೇರ್ ಪ್ರದೇಶಕ್ಕೆ ತಗಲುವ ಘಟಕ ವೆಚ್ಚ ರೂ.1,10,000/- ಗಳಲ್ಲಿ ಪ್ರತಿ ಫಲಾನುಭವಿಗೆ ಒಂದು ಹೆಕ್ಟೇರ್ ವರೆಗೆ ರೂ. 53,500/- ಗಳನ್ನು ಮೊದಲನೇ ವರ್ಷ ರೂ.44,750/- ಗಳನ್ನು ಹಾಗೂ ಎರಡನೇ ವರ್ಷದ ನಿರ್ವಹಣೆಗೆ ರೂ.8,750/ ಗಳ ಸಹಾಯಧನವನ್ನು ನೀಡಲಾಗುತ್ತಿದೆ.<br>2. **<u>ರೈತರ ತಾಕುಗಳಲ್ಲಿ ಪ್ರಾತ್ಯಕ್ಷತೆ ಹಾಗೂ ನಿರ್ವಹಣೆ</u>**<br>ರೈತರ ತಾಕುಗಳಲ್ಲಿ ಪ್ರಾತ್ಯಕ್ಷತೆ ಹಾಗೂ ನಿರ್ವಹಣೆ ಕೈಗೊಳ್ಳಲು ಒಂದು ಹೆಕ್ಟೇರ್ ಗೆ ರೂ. 35,000/- ಗಳನ್ನು 2 ವರ್ಷಗಳ ಅವಧಿಗೆ ಮೊದಲನೇ ವರ್ಷ ರೂ.17500/- ಗಳು ಮತ್ತು ಎರಡನೇ ವರ್ಷ ರೂ.17500/- ರಂತೆ ಸಹಾಯಧನ ನೀಡಲಾಗುತ್ತಿದೆ.<br>3. ಕೇರಾ ಸುರಕ್ಷಾ ಯೋಜನೆಯಡಿ ತೆಂಗಿನ ಮರ ಹತ್ತುವವರು / ತೆಂಗಿನ ಕಾಯಿ ಕೀಳುವವರು / ನೀರಾ ತಂತ್ರಜ್ಞರು / ತೆಂಗಿನ ತೋಟದಲ್ಲಿ ಕೆಲಸ ಮಾಡುವಾಗ ಏನಾದರೂ ಅಪಘಾತಕ್ಕೊಳಗಾಗಿ ಮರಣ ಹೊಂದಿದರೆ ರೂ. 5.00 ಲಕ್ಷ, ಶಾಶ್ವತ ಅಂಗವಿಕಲತೆಯಾದಲ್ಲಿ ರೂ.2.50 ಲಕ್ಷ, ಆಸ್ಪತ್ರೆ ವೆಚ್ಚ ರೂ. 1.00 ಲಕ್ಷಗಳು ಪರಿಹಾರ ನೀಡಲಾಗುತ್ತದೆ. ವಿಮೆ ವಿವರ ಕೆಳಕಂಡಂತಿದೆ. |

| ರೈತರ ವಂತಿಕೆ (ಪ್ರತಿ ರೈತರಿಗೆ) | ತೆಂಗು ಅಭಿವೃದ್ಧಿ ಮಂಡಳಿ ಸಹಾಯಧನ | ವಿಮೆಯ ಒಟ್ಟು ಮೊತ್ತ |
|---|---|---|
| ರೂ.94.00 | ರೂ.281.00 | ರೂ.375.00 |

4. ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ಖಾಸಗಿ ವಲಯದ ತೆಂಗಿನ ನರ್ಸರಿಗಳನ್ನು ಉತ್ತೇಜಿಸಲು ಪ್ರಸ್ತಾವನೆಯ ಶೇ. 25 ರಷ್ಟು ಅಥವಾ ರೂ. 2.00 ಲಕ್ಷದ ವರೆಗೆ 0.4 ಹೆಕ್ಟೇರ್ ಪ್ರದೇಶದ ನರ್ಸರಿ ನಿರ್ಮಾಣಕ್ಕೆ ಸಹಾಯಧನ ನೀಡಲಾಗುತ್ತಿದೆ.
5. ತೆಂಗು ಬೆಳೆಯ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ತೆಂಗು ಬೆಳೆಯುವ ರೈತರಿಗೆ ಪ್ರತಿ ಹೆಕ್ಟೇರ್ ಗೆ ರೂ. 6500 ರಿಂದ ರೂ. 15000 ರ ವರೆಗೆ ತಳಿಗೆ/ಪ್ರದೇಶಕ್ಕೆ ಅನುಗುಣವಾಗಿ ಪ್ರತಿ ಫಲಾನುಭವಿಗೆ 4 ಹೆಕೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ.

ಇ) ಕಳೆದ 3 ವರ್ಷಗಳಲ್ಲಿ 'ಕೇಂದ್ರ ತೆಂಗು ಅಭಿವೃದ್ಧಿ ಮಂಡಳಿ' ವತಿಯಿಂದ ರಾಜ್ಯದ ಎಷ್ಟು ಜನ ತೆಂಗು ಬೆಳೆಗಾರರು ನೆರವು ಮತ್ತು ಸೌಲಭ್ಯಗಳನ್ನು ಪಡೆದಿದ್ದಾರೆ? (ಪ್ರತಿ ಫಲಾನುಭವಿ ಪಡೆದಿರುವ ಸೌಲಭ್ಯಗಳ ಸಂಪೂರ್ಣ ವಿವರಗಳನ್ನು ಒದಗಿಸುವುದು)

ಕಳೆದ 3 ವರ್ಷಗಳಲ್ಲಿ ಎಂದರೆ 2021-22, 2022-23 ಮತ್ತು 2023-24 ನೇ ಸಾಲಿನಲ್ಲಿ 'ಕೇಂದ್ರ ತೆಂಗು ಅಭಿವೃದ್ಧಿ' ವತಿಯಿಂದ ರಾಜ್ಯದ ಒಟ್ಟು 52048 ಜನ ತೆಂಗು ಬೆಳೆಗಾರರು ನೆರವು ಮತ್ತು ಸೌಲಭ್ಯಗಳನ್ನು ಪಡೆದಿದ್ದಾರೆ.
ವಿವರ ಕೆಳಗಿನಂತಿದೆ.

| ಕಾರ್ಯಕ್ರಮ | 2021-22 | 2022-23 | 2023-24 | ಒಟ್ಟು |
|---|---|---|---|---|
| 1. ಹೊಸ ಮರುನಾಟಿ ಮತ್ತು ಪುನ:ಶ್ಚೇತನ ಹಾಗೂ ನಿರ್ವಹಣೆ ಕಾರ್ಯಕ್ರಮ | 9650 | 8862 | 10046 | 28558 |
| 2. ರೈತರ ತಾಕುಗಳಲ್ಲಿ ಪ್ರಾತ್ಯಕ್ಷತೆ | 434 | - | 18452 | 18886 |
| 3. ಕೇರಾ ಸುರಕ್ಷಾ ಯೋಜನೆ | - | - | 1326 | 1326 |
| 4. ಸಣ್ಣ ತೆಂಗಿನ ನರ್ಸರಿಗಳ ನಿರ್ಮಾಣ | 8 | 8 | 2 | 18 |
| 5. ತೆಂಗು ಬೆಳೆಯ ಪ್ರದೇಶ ವಿಸ್ತರಣೆ | 312 | 988 | 1163 | 2463 |
| ಒಟ್ಟು | 10404 | 9858 | 30989 | 51251 |

HORTI 312HGM 2024

**(ಎಸ್.ಎಸ್.ಮಲ್ಲಿಕಾರ್ಜುನ್)**
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು

ಎಸ್.ಎಸ್. ಮಲ್ಲಿಕಾರ್ಜುನ್
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು
ಹಾಗೂ ದಾವಣಗೆರೆ ಜಿಲ್ಲೆ ಉಸ್ತುವಾರಿ ಸಚಿವರು

## ಅನುಬಂಧ

## ತೆಂಗು ಬೆಳೆಯ ವಿಸ್ತೀರ್ಣ 2022-23

| ಕ್ರ. ಸಂ. | ಜಿಲ್ಲೆಗಳು | ವಿಸ್ತೀರ್ಣ (ಹೆ.) | ಉತ್ಪನ್ನ (ಮೆ. ಟನ್) |
|---|---|---|---|
| 1. | ಬೆಂಗಳೂರು (ನ) | 2797 | 12570 |
| 2. | ಬೆಂಗಳೂರು (ಗ್ರಾ) | 2877 | 22398 |
| 3. | ಚಿಕ್ಕಬಳ್ಳಾಪುರ | 462 | 3420 |
| 4. | ಚಿತ್ರದುರ್ಗ | 60874 | 227994 |
| 5. | ದಾವಣಗೆರೆ | 7908 | 46519 |
| 6. | ಕೋಲಾರ | 1023 | 5268 |
| 7. | ರಾಮನಗರ | 27960 | 126192 |
| 8. | ಶಿವಮೊಗ್ಗ | 7875 | 40555 |
| 9. | ತುಮಕೂರು | 224507 | 748549 |
| 10. | ಬಾಗಲಕೋಟೆ | 247 | 1904 |
| 11. | ಬೆಳಗಾವಿ | 244 | 1558 |
| 12. | ವಿಜಯಪುರ | 50 | 228 |
| 13. | ಧಾರವಾಡ | 244 | 1044 |
| 14. | ಗದಗ | 352 | 1649 |
| 15. | ಹಾವೇರಿ | 1041 | 6820 |
| 16. | ಉತ್ತರ ಕನ್ನಡ | 8822 | 48351 |
| 17. | ಬಳ್ಳಾರಿ | 97 | 590 |
| 18. | ಬೀದರ್ | 6 | 33 |
| 19. | ಕಲಬುರಗಿ | 22 | 101 |
| 20. | ಕೊಪ್ಪಳ | 158 | 1081 |
| 21. | ರಾಯಚೂರು | 96 | 613 |
| 22. | ಯಾದಗಿರಿ | 19 | 98 |
| 23. | ಚಾಮರಾಜನಗರ | 12072 | 62168 |
| 24. | ಚಿಕ್ಕಮಗಳೂರು | 72496 | 482867 |
| 25. | ದಕ್ಷಿಣ ಕನ್ನಡ | 35605 | 200022 |
| 26. | ಹಾಸನ | 118792 | 713189 |
| 27. | ಕೊಡಗು | 3106 | 26174 |
| 28. | ಮಂಡ್ಯ | 63264 | 460187 |
| 29. | ಮೈಸೂರು | 30094 | 118165 |
| 30. | ಉಡುಪಿ | 20598 | 115721 |
| 31. | ವಿಜಯನಗರ | 730 | 3580 |
| | ಒಟ್ಟು | 704438 | 3479608 |